

# ಹಳೆ ಒಗ್ಗರಣೆಯ 'ಜಾಟ್' ರುಸ್

'ಗದರ್ 2' ಹಿಂದಿ ಚಿತ್ರವು ಸನ್ನಿ ಡಿಯೋಲ್ ಸಿನಿಮಾ ಇನಿಂಗ್ಸ್ ಇನ್ನೂ ಬಾಕಿ ಇದೆ ಎನ್ನುವುದನ್ನು ರುಜುವಾತುಪಡಿಸಿತು. ಅದರ ಅಡ್ಡಪರಿಣಾಮವೇ 'ಜಾಟ್' ಹಿಂದಿ ಸಿನಿಮಾ.

ಏಪ್ರಿಲ್ 10ರಂದು ತೆರೆಕಂಡಿರುವ 'ಜಾಟ್' ಚರ್ವಿತ ಚರ್ವಣ ಹೂರಣವಿರುವ ಚಿತ್ರ ಎಂದು ಸಾಮಾಜಿಕ ಮಾಧ್ಯಮದಲ್ಲಿ ಅಭಿಮಾನಿಗಳೇ ಕಮೆಂಟಿಸುತ್ತಿದ್ದಾರೆ. ಚಿತ್ರದ ಬಿಡಿ ಬಿಡಿ ತುಣುಕುಗಳನ್ನು ರೀಲ್ಸ್ ಮಾಡಿ ಹರಿಬಿಟ್ಟು, ಒಂದಿಷ್ಟು ಮಂದಿಯನ್ನು ಚಿತ್ರಮಂದಿರಕ್ಕೆ ಕರೆತರುವ ತಂತ್ರವೂ ನಿರೀಕ್ಷಿತ ಫಲ ನೀಡಿಲ್ಲ.

'ಹೇಳಿ ಕೇಳಿ ಇದು ಪರೀಕ್ಷೆಯ ಸಮಯ. ಸುಮ್ಮನೆ ಎರಡು ಹೆಜ್ಜೆ ಹಾಕಿದರೆ ಬೆವರಿಳಿಯುವ ಸಮಯದಲ್ಲಿ ಸನ್ನಿ ಡಿಯೋಲ್ ಫೈಟಿಂಗ್ ಅನ್ನು ಯಾರು ತಾನೆ ನೋಡಿ ಇನ್ನೂ ಬೆವರುತ್ತಾರೆ' ಎಂಬ ಅರ್ಥದ ಕಮೆಂಟನ್ನು ಚಿತ್ರ ಅಭಿಮಾನಿಯೊಬ್ಬರು ಹಾಕಿದ್ದಾರೆ. ಅದೊಂದು ಕಮೆಂಟಿನ ಸುತ್ತ ಇನ್ನೂ ಆಸಕ್ತಿಕರ ಚರ್ಚೆಗಳು ಹುತ್ತಗಟ್ಟಿವೆ.

ಮೈತ್ರಿ ಮೂವಿ ಮೇಕರ್ಸ್ 'ಜಾಟ್' ಸಿನಿಮಾ ನಿರ್ಮಿಸಿದೆ. ತೆಲುಗು ಚಿತ್ರಗಳ ವಿತರಣೆಗೇ ಹೆಸರುವಾಸಿಯಾಗಿರುವ ಈ ಸಂಸ್ಥೆಯ ಕಣ್ಣು ಸನ್ನಿ ಮೇಲೆ ಬಿದ್ದದ್ದಾದರೂ ಹೇಗೆ ಎನ್ನುವ ಪ್ರಶ್ನೆ ಮೂಡುವುದು ಸಹಜ.

ಗೋಪಿಚಂದ್ ಮಲಿನೇನಿ 2010ರಲ್ಲಿ 'ಡಾನ್ ಸೀನು' ತೆಲುಗು ಚಿತ್ರದಿಂದ ಸ್ವತಂತ್ರ ನಿರ್ದೇಶಕರಾಗಿದ್ದವರು. ರವಿತೇಜ ಅವರ ಜಾಯಮಾನಕ್ಕೆ ಹೊಂದುವಂತಹ ಸಾಹಸಪ್ರಧಾನವೂ ಹಾಸ್ಯ ದೃಶ್ಯಗಳೂ ಇರುವ ಸಿನಿಮಾಗಳನ್ನು ನಿರ್ದೇಶಿಸಿ, ಗೆದ್ದವರು. 'ಕ್ರ್ಯಾಕ್' ಸಿನಿಮಾ ಕೂಡ ಒಂದು ಮಟ್ಟಕ್ಕೆ ಲಾಭ ತಂದುಕೊಟ್ಟಿತ್ತು. ನಂದಮೂರಿ ಬಾಲಕೃಷ್ಣ ನಾಯಕರಾಗಿದ್ದ 'ವೀರಸಿಂಹಾರೆಡ್ಡಿ' ಚಿತ್ರ ಎರಡು ವರ್ಷಗಳ ಹಿಂದೆ ತೆರೆಕಂಡು, ಗೋಪಿಚಂದ್ ಇನ್ನೂ ಫಾರ್ಮ್‌ನಲ್ಲಿ ಇದ್ದಾರೆನ್ನುವುದನ್ನು ಸಾಬೀತುಪಡಿಸಿತ್ತು. ಆ ಸಿನಿಮಾ ನಿರ್ಮಿಸಿದ್ದ ಮೈತ್ರಿ ಮೂವಿ ಮೇಕರ್ಸ್ ಸಂಸ್ಥೆ ಮತ್ತೆ ರವಿತೇಜ–ಗೋಪಿಚಂದ್ ಕಾಂಬಿನೇಷನ್‌ನಲ್ಲಿ ಸಿನಿಮಾ ಮಾಡಲು ಉತ್ಸುಕವಾಗಿತ್ತು. ಅದೇ ಹೊತ್ತಿಗೆ 'ಗದರ್ 2' ದೊಡ್ಡ ಯಶಸ್ಸನ್ನು ಕಂಡಿತು. ಬ್ರೇನ್‌ಲೆಸ್ ಸಾಹಸಪ್ರಧಾನ ಚಿತ್ರ ಗೆಲ್ಲಿಸಬಲ್ಲ ತಾಕತ್ತು ಸನ್ನಿ ಅವರಿಗೆ ಇದೆ ಎನ್ನುವ ಲೆಕ್ಕಾಚಾರದಲ್ಲಿ ಅವರನ್ನು ನಾಯಕರನ್ನಾಗಿ ಗೊತ್ತುಪಡಿಸಲಾಯಿತು.

ತೆಲುಗಿನ ತಮನ್ ಸಂಗೀತ ಸಂಯೋಜನೆ ಮಾಡಿದರು. ಜಗಪತಿ ಬಾಬು, ರೆಜಿನಾ ಕೆಸ್ಸಾಂಡ್ರಾ, ರವಿಶಂಕರ್ ಎಲ್ಲರೂ ದಕ್ಷಿಣ ಭಾರತದ ಚಿತ್ರತಾರೆಗಳು. ಅವರೊಟ್ಟಿಗೆ ರಣದೀಪ್ ಹೂಡಾ, ಜರೀನಾ ವಹಾಬ್, ಸಯಾಮಿ ಖೇರ್, ಮಕರಂದ್ ದೇಶಪಾಂಡೆ ತಾರಾಗಣ ಸೇರಿಕೊಂಡರು.

ಎಲ್ಲ ಖರ್ಚುಗಳನ್ನು ಸೇರಿ ₹100 ಕೋಟಿಯಲ್ಲಿ ಚಿತ್ರ ತಯಾರಾಯಿತು. ಅದರಲ್ಲಿ ಅರ್ಧದಷ್ಟು ಸನ್ನಿ ಸಂಭಾವನೆ ಎನ್ನುತ್ತವೆ ಕೆಲವು ಮೂಲಗಳು. ಹಾಕಿದ ಬಂಡವಾಳಕ್ಕಂತೂ ಮೋಸವಿಲ್ಲ ಎಂಬ ಸ್ಥಿತಿಗೆ ಚಿತ್ರ ಮುಟ್ಟಿದೆಯಾದರೂ 'ಗದರ್ 2' ಚಿತ್ರಕ್ಕೆ ಸಿಕ್ಕಷ್ಟು ಪ್ರಚಂಡ ಯಶಸ್ಸು ದೊರೆತಿಲ್ಲ. ■

# ಅಭಿಜಿತ್ ಟೀಕೆಗೂ ರೆಹಮಾನ್ 'ಓಕೆ'

ಎ.ಆರ್. ರೆಹಮಾನ್ ಸ್ವರ ಸಂಯೋಜನೆ ಮಾಡಲು ತಂತ್ರಜ್ಞಾನವನ್ನೇ ಅತಿಯಾಗಿ ಅವಲಂಬಿಸಲು ಪ್ರಾರಂಭಿಸಿ, ಸಂಗೀತಗಾರರು, ವಾದ್ಯಕಾರರಿಗೆ ಕೆಲಸವೇ ಇಲ್ಲದ ಪರಿಸ್ಥಿತಿ ಉಂಟಾಯಿತು ಎಂಬರ್ಥದ ಟೀಕೆಯನ್ನು ಗಾಯಕ ಅಭಿಜಿತ್ ಭಟ್ಟಾಚಾರ್ಯ ಇತ್ತೀಚೆಗೆ ಸಂದರ್ಶನವೊಂದರಲ್ಲಿ ಮಾಡಿದರು.

ಅದಕ್ಕೆ ಇನ್ನೊಂದು ಸಂದರ್ಶನದಲ್ಲಿ ರೆಹಮಾನ್ ಪ್ರತಿಕ್ರಿಯೆ ನೀಡಿರುವುದು ಆಸಕ್ತಿಕರವಾಗಿದೆ: 'ಎಲ್ಲಕ್ಕೂ ನನ್ನನ್ನು ಟೀಕಿಸುವುದನ್ನು ಕಂಡಾಗಲೆಲ್ಲ ನನ್ನಲ್ಲಿ ಹಲವು ಭಾವಗಳು ಮೂಡುತ್ತವೆ. ಪ್ರತಿಯೊಬ್ಬರಿಗೂ ತಮಗೆ ಅನಿಸಿದ್ದನ್ನು ಹೇಳುವ ಸ್ವಾತಂತ್ರ್ಯವಿದೆ. ಅಭಿಜಿತ್ ತಮಗೆ ಅನಿಸಿದ್ದನ್ನು ಹೇಳಿದ್ದಾರಷ್ಟೆ. ಅವರ ಮೇಲೆ ನನಗೆ ಈಗಲೂ ಗೌರವವಿದೆ. ಅವರಿಗೆ ಒಂದು ತುಂಡು ಕೇಕ್ ಕಳುಹಿಸಿಕೊಡಲು ಇಷ್ಟಪಡುವೆ.'

ರೆಹಮಾನ್ ಇನ್ನೂ ಮುಂದುವರಿದು, 'ದುಬೈನಲ್ಲಿ ನಾನು ಆರ್ಕೆಸ್ಟ್ರಾ ರೂಪಿಸಿದ್ದೇನೆ. ಅದರಲ್ಲಿ 60 ಮಹಿಳಾ ಸಂಗೀತಗಾರರು ಇದ್ದಾರೆ. ಹಿಂದಿಯ 'ಛಾವಾ' ಸಿನಿಮಾ ಇರಬಹುದು, ತಮಿಳಿನ 'ಪೊನ್ನಿಯಿನ್ ಸೆಲ್ವನ್' ಇರಬಹುದು... ಅವುಗಳ ಒಂದೊಂದು ಹಾಡಿಗೂ 100 ಜನ ಸಂಗೀತಗಾರರು ಕೆಲಸ ಮಾಡುತ್ತಾರೆ. ಆರ್ಕೆಸ್ಟ್ರಾದಲ್ಲಿ ಇರುವ ಅಷ್ಟೂ ಕಲಾವಿದರಿಗೆ ತಿಂಗಳ ಸಂಬಳ, ವಿಮೆ, ಆರೋಗ್ಯ ವಿಮೆ ಎಲ್ಲ ಸೌಲಭ್ಯಗಳನ್ನೂ ಒದಗಿಸುತ್ತಿದ್ದೇನೆ. ಕರಡು ಸಂಗೀತ ರೂಪಿಸುವಾಗ ಮೊದಲಿನಂತೆ ವಾದ್ಯಕಾರರನ್ನು ಬಳಸಿಕೊಂಡು, ಆಮೇಲೆ ಅದನ್ನು ಬಳಸಿಕೊಳ್ಳಲು ಸಾಧ್ಯವಿಲ್ಲ ಎಂದು ಹೇಳುವ ಕಾಲ ಇದಲ್ಲ. ತಂತ್ರಜ್ಞಾನವನ್ನು ಬಳಸಿಕೊಂಡು, ಅಂತಹ ಹೆಚ್ಚುವರಿ ಕೆಲಸಗಳನ್ನು ತಪ್ಪಿಸಬಹುದಷ್ಟೆ' ಎಂದು ವಿವರಣೆ ಕೊಟ್ಟಿದ್ದಾರೆ.

ಅಭಿಜಿತ್ ಮತ್ತೆ ಇದಕ್ಕೆ ಏನೊಂದನ್ನೂ ಹೇಳಿಲ್ಲ. ■

